surveyor ವಿಷಯದ ಬಗ್ಗೆ ಕಾಳಜಿಯನ್ನು ತೋರಿಸಿದ್ದೀರಿ ಅದರ ಬಗ್ಗೆ ಗಮನ ಹರಿಸುತ್ತೇವೆ. ಈಗಾಗಲೇ ಸರ್ಕಾರದ ವತಿಯಿಂದ ಸುಮಾರು 800 ಮಂದಿ surveyors ಅನ್ನು ನೇಮಕ ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ಹಣಕಾಸು ಇಲಾಖೆಯಿಂದ ಸುಮಾರು 400 ಮಂದಿಗೆ ನಿನ್ನೆ clearance ಮಾಡಿದ್ದಾರೆ. ಇನ್ನು ಉಳಿದವರ ಬಗ್ಗೆ ಕೂಡ ನಾವು ಗಮನ ಹರಿಸಿ Appointment ಮಾಡುತ್ತೇವೆ. ಒಟ್ಟಿನಲ್ಲಿ ಸರ್ಕಾರದಿಂದ ಹೆಚ್ಚಿನ surveyors ತೆಗೆದುಕೊಂಡು ತಾವು ಏನು ಕಳಕಳಿ ವ್ಯಕ್ತಪಡಿಸಿದ್ದೀರಿ ಅದನ್ನು ಸರಿ ಮಾಡುತ್ತೇವೆ. Licensed Surveyors ತಪ್ಪು ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದರೆ ಖಂಡಿತ ಅವರ license ಅನ್ನು ರದ್ದು ಮಾಡಿ ಅವರ ಮೇಲೆ criminal ಮೊಕದ್ದಮೆ ಹೂಡಲು ಸರ್ಕಾರ ಯಾವುದೇ ರೀತಿಯಲ್ಲಿ ಹಿಂದು ಮುಂದು ನೋಡುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ :- Survey Departmentನಲ್ಲಿ ಜವಾನರಿಂದ ಹಿಡಿದು Driver ಗಳು surveyor ಗಳು ಕೆಲಸ ಮಾಡದೇ Strike ಮಾಡುತ್ತಿರುವುದರಿಂದ ಇಡೀ Survey Department ನಿಂತು ಹೋಗಿದೆ. ಈ ವಿಷಯದ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಜಿ. ಕರುಣಾಕರ ರೆಡ್ಡಿ :-ಇವತ್ತು ಗಮನಸೆಳೆಯುವ ವಿಚಾರದಲ್ಲಿ ಕೊಟ್ಟದ್ದು ಬೇರೆ ವಿಷಯ. ಆದರೆ, ತಾವು ಹೇಳಿರುವ ವಿಷಯ ಸರ್ಕಾರ ಗಮನದಲ್ಲಿದೆ. ಅದರ ಬಗ್ಗೆ ಮುಂದೆ ವಿಚಾರ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ.

ಆ) ವಿಷಯ: ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಗ್ರಾಮೀಣ ಭಾಗದ ರೈತರ ಜಮೀನುಗಳಿಗೆ ಜವಳು ಉಂಟಾಗಿ ಕೃಷಿ ಹಾಗೂ ರಸ್ತೆಗಳು ಹಾಳಾಗುತ್ತಿರುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ :- ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಸುತ್ತಮುತ್ತಲಿನ ಗ್ರಾಮಗಳ ರೈತರ ಜಮೀನುಗಳಿಗೆ ಜವಳು ಉಂಟಾಗಿ ಕೃಷಿ ಹಾಗೂ ರಸ್ತೆಗಳು ಹಾಳಾಗುತ್ತಿರುವ ಬಗ್ಗೆ.

ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :- ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ರೈತರ ಜಮೀನುಗಳು ಜವಳು ಉಂಟಾಗಿರುವ ಕುರಿತು ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಬಾಗಲಕೋಟೆ ಇವರು ಕಂಕಣವಾಡಿ ಗ್ರಾಮದ ಗುಹೇಶ್ವರ ನಡುಗಡ್ಡೆಯಲ್ಲಿ ಮಾತ್ರ ಬರುವ 573 ಎಕರೆ ಜಮೀನಿನ ಮಣ್ಣಿನ ವಿಶ್ಲೇಷಣೆ ಮಾಡಿದಾಗ 50% ಜವಳು ಕಂಡು ಬಂದಿದ್ದರ ಬಗ್ಗೆ ಮಹಾ ವ್ಯವಸ್ಥಾಪಕರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಬಾಗಲಕೋಟೆ ಇವರ ಗಮನಕ್ಕೆ ಬಂದಿರುವುದರ ಬಗ್ಗೆ ತಿಳಿಸಿರುತ್ತಾರೆ.

ಜಮಖಂಡಿ ತಾಲ್ಲೂಕಿನ (1) ಗುಣದಾಳ-ಬಿದರಿ (2) ಹಿರೇಪಡಸಲಗಿ-ಬಿದರಿ (3) ಹಿರೇಪಡಸಲಗಿ-ಟಕ್ಕಳಕಿ, ರಸ್ತೆಗಳು ಮೂಲತಃ ಜಿಲ್ಲಾ ಪಂಚಾಯತ್ ರಸ್ತೆಗಳಾಗಿದ್ದು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಈ ರಸ್ತೆಗಳು ಸಂಪರ್ಕ ಕಡಿದು ಹೋಗಿದ್ದರಿಂದ, ಜನರ ಬೇಡಿಕೆಗೆ ಅನುಗುಣವಾಗಿ ಈ ರಸ್ತೆಗಳ ಕಟ್ಟಡಗಳು ಮತ್ತು ಅಪ್ರೋಚ್ ಎಂಬ್ಯಾಕ್‌ಮೆಂಟ್ ಎತ್ತರಿಸುವ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ಕೈಗೆತ್ತಿಕೊಳ್ಳಲು ನಿಗಮಕ್ಕೆ ಹಸ್ತಾಂತರಿಸಿದ್ದು, ಈ ಕಾಮಗಾರಿಗಳನ್ನು ನಿಗಮದಿಂದ 2004 ರಲ್ಲಿ ಕೈಗೆತ್ತಿಕೊಂಡು 2005-06 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ (ಜಮಖಂಡಿ) :- 519.6 ಮೀಟರ್ ಹಿನ್ನೀರು ಸಂಗ್ರಹ ಆದ ಮೇಲೆ ರೈತರ ಜಮೀನಿಗೆ ಸರ್ಕಾರ ಪರಿಹಾರವನ್ನು ಕೊಟ್ಟಿದೆ. ಇದು ಅತ್ಯಂತ ಜ್ವಲಂತ ಸಮಸ್ಯೆ. ಈ Seepage Capillary Action ಎಂದು ಹೇಳುತ್ತಾರೆ. 519.6 ಇರುವಂಥದ್ದು capillary action ಮೂಲಕ ಕಪ್ಪು ಮಣ್ಣಿನ ಜಮೀನಿಗೆ ಜವಳು ಉಂಟಾಗಿ ಸುಮಾರು 521 ಮೀಟರ್ ಎತ್ತರದವರೆಗೆ ಯಾವುದೇ ರೈತರ ಜಮೀನಿನಲ್ಲಿ ಬೆಳೆ ಬರುತ್ತಿಲ್ಲ. ಹೀಗಾಗಿ ಸರ್ಕಾರ ನೀರಾವರಿ ಯೋಜನೆ ಮಾಡಿ ಅತ್ಯಂತ ಫಲವತ್ತಾದ ಜಮೀನನ್ನು ನಾವು ಕಳೆದುಕೊಂಡಿದ್ದೇವೆ. ನೀರು ಇನ್ನೊಂದು ಜಿಲ್ಲೆಗೆ ಹೋಗಿ worry ಮಾತ್ರ ಉಳಿದಿದೆ. ಇವತ್ತು ರೈತರು ಬದುಕಬೇಕೆಂದರೆ, ಮುಂದೆ ಅವರಿಗೆ ಒಳ್ಳೆಯ ಭವಿಷ್ಯ ಆಗಬೇಕು, ಮುಂದಿನ ಪೀಳಿಗೆಯವರು ಕೃಷಿ ಮಾಡಬೇಕೆಂದರೆ ಇಲ್ಲಿ ಏನು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಸಂಪೂರ್ಣ ಜವಳು ಉಂಟಾಗಿ ರೈತರು ಗುಳೆ ಹೋಗುವ ಸಂದರ್ಭ ಬಂದಿದೆ. ಇಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. 521 ಮೀಟರ್ ಎತ್ತರದವರೆಗೆ, ಭವಿಷ್ಯದಲ್ಲಿ 524 ಮೀಟರ್ ಕೂಡ

ಆಗಬಹುದು. 521 ಮೀಟರ್‌ವರೆಗೆ ಎಲ್ಲಾ ರೈತರ ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಪರಿಹಾರ ಕೊಟ್ಟಾಗ ಮಾತ್ರ ರೈತರು ಬದುಕಲಿಕ್ಕೆ ಸಾಧ್ಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಲ್ಲಿ ಕಂಕಣವಾಡಿ ಗ್ರಾಮದ ಸುಮಾರು 573 ಎಕರೆ ಜಮೀನು ಸಂಪೂರ್ಣ ನೀರಿನಿಂದ ಸುತ್ತುವರಿದಿದೆ. ಈ ಬಗ್ಗೆ ಸಮ್ಮಿಶ್ರ ಸರ್ಕಾರದ ಅಧಿಕಾರವಾಧಿಯಲ್ಲಿ ಉಪಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ ಅಧ್ಯಕ್ಷರೆ ತಾವು ಕಂದಾಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ದಿನಾಂಕ 7.8.2007 ರಂದು ವಿಧಾನಸಭೆಯ ಕೊಠಡಿ ಸಂಖ್ಯೆ 334 ನಡೆದಂತಹ ಸಭೆಯಲಿ ಸಂಪೂರ್ಣವಾಗಿ ಚರ್ಚೆಯಾಗಿ ನಿರ್ಣಯವಾಗಿದೆ. 500 ಎಕರೆಗಿಂತ ಹೆಚ್ಚಿರುವ ಜಮೀನು ಕೃಷಿಗೆ ಯೋಗ್ಯವಲ್ಲ. ಆ ಜಮೀನನ್ನು ಸ್ವಾಧೀನಪಡಿಸಿಕೊಂಡು ಹಣ ಕೊಡಬೇಕೆಂದು ತೀರ್ಮಾನವಾಗಿತ್ತು. ತದನಂತರ ಕಾರಣಾಂತರದಿಂದ ಸರ್ಕಾರ ಬಿದ್ದು ಹೋದ ನಂತರ ಯಾರೋ ಒಬ್ಬ ಅಧಿಕಾರಿಯ ಒಂದು remarkನಿಂದ ಈ ವಿಷಯವನ್ನು ಅಲ್ಲಿಗೇ ಕೈಬಿಟ್ಟಿದ್ದಾರೆ. ಹೀಗಾಗಿ ಕಂಕಣವಾಡಿಯ 500 ಎಕರೆಗಿಂತಲೂ ಜಾಸ್ತಿ ಜಮೀನು ಸಂಪೂರ್ಣ ನೀರಿನಿಂದ ಸುತ್ತುವರೆದು ಅಲ್ಲಿಗೆ ಯಾವುದೇ ರೀತಿಯಲ್ಲಿ ಜನರು ಹೋಗವುದಕ್ಕೆ ಬರವುದಕ್ಕೆ ಸಾಧ್ಯವಿಲ್ಲ. ಕೃಷಿ ಮಾಡುವುದಕ್ಕೂ ಸಾಧ್ಯವಿಲ್ಲ.

ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವ ರೈತರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ನಮ್ಮ ಸರ್ಕಾರ ಸಂಪೂರ್ಣವಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅವರಿಗೆ ತಕ್ಷಣವೇ ಪರಿಹಾರ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಆಗ್ರಹಿಸುತ್ತೇನೆ.

ಅದರ ಜೊತೆಗೆ, ಇಲ್ಲಿನ ನಡುಗಡ್ಡೆಗಳಾದ ಚಿಕ್ಕಪಡಸಲಗಿ, ಕವಟಗಿ ಇರಬಹುದು. ಹಿನ್ನೀರು ಬಂದಾಗ 4-6 ತಿಂಗಳವರೆಗೆ ಇಲ್ಲಿನ ರಸ್ತೆ ಮೇಲೆ ಜನರಿಗೆ ಹೋಗುವುದಕ್ಕೆ, ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಭಾಗದ ರೈತರು ಕೃಷಿ ಮಾಡುವುದಕ್ಕೆ ಅಥವಾ ಸಾಗಾಟಕ್ಕೆ ಸಂಪೂರ್ಣ ತೊಂದರೆಯಾಗುತ್ತದೆ. ಹೀಗಾಗಿ, ಚಿಕ್ಕಪಡಸಲಗಿ ಮತ್ತು ಕವಟಗಿ ಸಮೀಪವಿರುವ ರಸ್ತೆಗಳನ್ನು ಎತ್ತರಿಸುವುದು ಅನಿವಾರ್ಯ. ಅದು ಜಿಲ್ಲಾ ಪಂಚಾಯತ್ ರಸ್ತೆಯಾಗಿರಬಹುದು, ಲೋಕೋಪಯೋಗಿ ಇಲಾಖೆಯ ರಸ್ತೆಯಾಗಿರಬಹುದು, ಆಲಮಟ್ಟಿ ಹಿನ್ನೀರಿನಿಂದ ಅಲ್ಲಿನ ರಸ್ತೆಗೆ ತೊಂದರೆಯಾಗಿದೆ. ಆದುದರಿಂದ, ಹಿನ್ನೀರಿಗೆ ತುತ್ತಾಗಿರುವ ರಸ್ತೆಗಳನ್ನು ಎತ್ತರಿಸುವ

ಕೆಲಸವನ್ನು ಯುಕೆಪಿ ಇಲಾಖೆಯಿಂದ ಮಾಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಹಿರೇಪಡಸಲಗಿ ಮತ್ತು ಚಿಕ್ಕಪಡಸಲಗಿ ನಡುವೆ ಹಿನ್ನೀರಿನ ಸಂಗ್ರಹವಿದೆ. ಇದೇ ರೀತಿ ಹಿರೇಪಡಸಲಗಿ-ಚಿಕ್ಕಪಡಸಲಗಿ, ಬಿದರಿ-ಗುಣದಾಳ ನಡುವೆ ಹಿನ್ನೀರು ಇದೆ. ಈ ಮೂರು ರಸ್ತೆಗಳ ಕಾಮಗಾರಿ ಕಳಪೆಯಾದಾಗ, ಸಂಚಾರದ ವ್ಯವಸ್ಥೆಯನ್ನು ಸರ್ಕಾರ ತಾತ್ಪೂರ್ತಿಕವಾಗಿ ಮಾಡಿತ್ತು. ವಿಶೇಷವಾಗಿ, ಮಳೆಯಾದ ಪರಿಣಾಮ ಆ ಮೂರು ರಸ್ತೆಗಳು ಕೊಚ್ಚಿ ಹೋಗಿ, ಒಂದೆರಡು ಕಿಲೋಮೀಟರ್‌ಗಳಷ್ಟು ಅಂತರದಲ್ಲಿರುವ ಪ್ರದೇಶಕ್ಕೆ ಇವತ್ತು ರೈತ ಬರಬೇಕಾದರೆ ಸುಮಾರು 15-20 ಕಿಲೋಮೀಟರ್‌ಗಳಷ್ಟು ಸುತ್ತಿಕೊಂಡು ಬರಬೇಕಾದ ಸ್ಥಿತಿ ಬಂದಿದೆ. ಕೃಷಿ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದೆ. ಸರ್ಕಾರ ಅದರ ಜವಾಬ್ದಾರಿ ತೆಗೆದುಕೊಂಡು ಇದೇ ಬೇಸಗೆಯಲ್ಲಿ ಕೆಲಸ ಮಾಡಿಸಬೇಕು. ಈ ಮೂರು ರಸ್ತೆಗಳಿಗೆ ಹೊಸದಾಗಿ ಚಿಕ್ಕ ಚಿಕ್ಕ ಸೇತುವೆಗಳನ್ನು ಕಟ್ಟುವುದರ ಮೂಲಕ ಶಾಶ್ವತ ವ್ಯವಸ್ಥೆಯೊಂದನ್ನು ಕಲ್ಪಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :- ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಶಾಸಕರು ಕಂಕಣವಾಡಿ ಗ್ರಾಮದ ಗುಹೇಶ್ವರ ನಡುಗಡ್ಡೆ ಬಳಿ ಇರುವ 573 ಎಕರೆಯಷ್ಟು ಜಮೀನಿನ ಬಗ್ಗೆ ಏನು ಹೇಳಿದ್ದಾರೆ, ಆ ಪ್ರದೇಶ ಸಂಪೂರ್ಣ ಮುಳುಗಡೆಯಾಗಿಲ್ಲ. ಆದರೆ, ನಡುಗಡ್ಡೆಯಾಗಿದೆ. ಸುತ್ತಲೂ ನೀರು ನಿಂತಿದ್ದರಿಂದ ಅಲ್ಲಿ ಬಂಜರಾಗುವ ಎಲ್ಲಾ ಸಾಧ್ಯತೆಗಳೂ ಇದೆಯೆಂಬ ವರದಿ ಬಂದಿದೆ. ಆ ಹಿನ್ನೆಲೆಯಲ್ಲಿ ಈಗಾಗಲೇ 52 structures ಬಗ್ಗೆ ಸರ್ವೆ ಕಾರ್ಯ ಮುಗಿದಿದ್ದು, ಲ್ಯಾಂಡ್ ಸರ್ವೆ ಪ್ರಗತಿಯಲ್ಲಿದೆ. ಸರ್ವೆ ರಿಪೋರ್ಟ್ ಬಂದ ತಕ್ಷಣ ಪುನ: ಪರಿಹಾರ ಒದಗಿಸಿಕೊಡುವುದಕ್ಕೆ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುತ್ತೇವೆ. ಇದು ಮೊದಲನೆಯದು.

ಎರಡನೆಯದು, ರಸ್ತೆಗಳ ಬಗ್ಗೆ ಏನು ಹೇಳಿದ್ದಾರೆ, ಇಲ್ಲಿ ಗಮನಿಸಬೇಕಾಗಿರುವುದೇನೆಂದರೆ, ಇವು ಜಿಲ್ಲಾ ಪಂಚಾಯತ್ ಮತ್ತು ಲೋಕೋಪಯೋಗಿ ಇಲಾಖಾ ರಸ್ತೆಗಳಾಗಿವೆ. ಹಿನ್ನೀರಿನಿಂದ ಮುಳುಗಡೆಯಾಗಿರುವ ಪ್ರದೇಶದಲಿ ತೊಂದರೆಯುಂಟಾದಾಗ ಈಗಾಗಲೇ ಒಂದು ಸಲ ರಿಪೇರಿ ಮಾಡಲಾಗಿದೆ. ಎರಡೂವರೆ ಕೋಟಿ ರೂ.ಗಳಷ್ಟು ಖರ್ಚು ಮಾಡಿ ರಸ್ತೆಗಳನ್ನು ರಿಪೇರಿ ಮಾಡಿದ್ದೇವೆ. ಅಲ್ಲಿ ಪ್ರವಾಹ ಬಂದಿದ್ದರಿಂದ ಆ ರಸ್ತೆಗಳು ಪುನ: ಕೆಟ್ಟಿವೆ. ಆದುದರಿಂದ, ಪ್ರವಾಹ

ವಿಕೋಪ ಪರಿಹಾರ ನಿಧಿಯಿಂದ ಜಿಲ್ಲಾ ಪಂಚಾಯತ್ ಮತ್ತು ಲೋಕೋಪಯೋಗಿ ಇಲಾಖೆಯು ಕೆಲಸ ಮಾಡಬೇಕಾಗಿದೆ. ನಾವು ಈಗಾಗಲೇ ಅದರ ಅಂದಾಜು ಮಾಡಿದ್ದೇವೆ. ಸುಮಾರು 5 ಕೋಟಿ 85 ಲಕ್ಷ ರೂ.ಗಳು ಬೇಕಾಗುತ್ತದೆ. ಅದರ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಕೂಡಲೇ ರಸ್ತೆ ರಿಪೇರಿಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಶ್ರೀಕಾಂತ ಕುಲಕರ್ಣಿ ಸುಬ್ಬರಾವ್ :- ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ಕಳಪೆ ಏಕೆ ಆಯಿತು ಎನ್ನುವುದರ ಬಗ್ಗೆ ಒಂದು ಎನ್‌ಕ್ವೇರಿ ಆಗಬೇಕು. ಜೊತೆಗೆ, ಈ ಕೆಲಸವನ್ನು ಯಾವುದೇ ಇಲಾಖೆ ಮೇಲೆ ಹಾಕದೆ ಯುಕೆಪಿಯಿಂದ ತಕ್ಷಣವೇ ಹಣ ಮಂಜೂರು ಮಾಡಿ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಮತ್ತು ಬೇಸಗೆಯಲ್ಲಿ ಕೆಲಸವಾಗಬೇಕು. ಮುಂದಿನ ಜೂನ್-ಜುಲೈ ತಿಂಗಳಿನಲ್ಲಿ, ಮಳೆಗಾಲ ಬರುವುದರೊಳಗೆ ಅಲ್ಲಿ ರಸ್ತೆಗಳಾದರೆ ಮಾತ್ರ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ :- ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ :- ಇದರ ಜೊತೆಗೆ, ಇನ್ನೊಂದು ಅಂಶವೇನೆಂದರೆ, ಮುಳುಗಡೆಯಾದ ಗ್ರಾಮಾಂತರ ಭಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಸಮ್ಮತಿ ನೀಡುವುದಿಲ್ಲ. ವಿಶೇಷವಾಗಿ, ಶಿಕ್ಷಣ ಬಗ್ಗೆ ಹೇಳುವುದಾದರೆ ಪುನರ್ವಸತಿ ಕೇಂದ್ರಗಳಿಗೆ ಹೋಗಲು ಅಲ್ಲಿನ ಜನರು ಸಿದ್ಧರಿಲ್ಲ. ಆದರೆ, ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲೇಬೇಕಾಗುತ್ತದೆ. ಶಾಲೆಗಳನ್ನು ಬಹಳ ದೊಡ್ಡ ಮಟ್ಟದಲ್ಲಿ ದುರಸ್ತಿಪಡಿಸಬೇಕಾಗಿದೆ. ಇವತ್ತೋ ನಾಳೆಯೋ ಬೀಳುವ ಸ್ಥಿತಿಯಲ್ಲಿ ಕೆಲವು ಶಾಲೆಗಳಿವೆ. ಹೀಗಾಗಿ, ಮುಳುಗಡೆ ಗ್ರಾಮದಲ್ಲಿ ಹೊಸ ಶಾಲಾ ಕೊಠಡಿಗಳನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಸಿದ್ಧವಿಲ್ಲ. ಆದುದರಿಂದ, ಕಾನೂನಿನಲ್ಲಿ ಬದಲಾವಣೆ ತಂದು ಕನಿಷ್ಠ ಪಕ್ಷ ಶಿಕ್ಷಣಕ್ಕೆ ಮಹತ್ವ ಕೊಟ್ಟು, ಗ್ರಾಮಾಂತರ ಪ್ರದೇಶದಲ್ಲಿ ಹೊಸ ಶಾಲಾ ಕೊಠಡಿಗಳನ್ನು ಮಂಜೂರು ಮಾಡಿಕೊಡಬೇಕೆಂದು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ :- ಸನ್ಮಾನ್ಯ ಸಭಾಧ್ಯಕ್ಷರೆ, R&Rನಲ್ಲಿ ನಾವು ಸಂಪೂರ್ಣ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ. ಶಾಲೆ ಇರಬಹುದು, ರಸ್ತೆಗಳಿರಬಹುದು, ಕೆಲವು ಸಂದರ್ಭಗಳಲ್ಲಿ ಅವರು ಬಿಟ್ಟು ಹೋಗುವುದಿಲ್ಲ. ಅರೆ ಮುಳುಗಡೆಯಾಗಿರುವ ಪ್ರದೇಶಗಳಿಂದ ಅಲ್ಲಿನ ಜನರು

ಬೇರೆಡೆಗೆ ಬಿಟ್ಟು ಹೋಗುವ ಸಮಸ್ಯೆ ಇದೆ. ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಯಾವ ಗ್ರಾಮದ ಬಗ್ಗೆ ಹೇಳುತ್ತಾರೋ, ಅದಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಂಡು ಶಾಲೆಗಳ ಮಂಜೂರಾತಿಗೆ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಶ್ರೀಕಾಂತ ಕುಲಕರ್ಣಿ ಸುಬ್ಬರಾವ್ :- ಈಗಾಗಲೇ ಅಲ್ಲಿರುವ ಜಮೀನು ಸಾಕಷ್ಟು ಜವುಳು-ಸವುಳಿನಿಂದ ಕೂಡಿದೆ. ಅದನ್ನು ತಾವು 21ರವರೆಗೆ ತೆಗೆದುಕೊಳ್ಳುವ ನಿರ್ಣಯ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನೀರು ಹೆಚ್ಚಾದಲ್ಲಿ ಮಹಾರಾಷ್ಟ್ರದಲ್ಲಿ ಯಾವ ತರಹ ಜವುಳು ತೆಗೆಯುವ ಪ್ರಯತ್ನವನ್ನು ಅಲ್ಲಿನ ಸರ್ಕಾರ ಮಾಡಿದೆಯೋ, ಅದೇ ಮಾದರಿಯನ್ನು ಅಭ್ಯಸಿಸುವ ಮೂಲಕ ನೀವು ಕೂಡ ಲಕ್ಷಾಂತರ ಹೆಕ್ಟೇರ್‌ಗಳಷ್ಟು ಜಮೀನನ್ನು ಜವಳು ತೆಗೆಯಬೇಕು. ಇವತ್ತು ಹಿಪ್ಪರಗಿ ಜಲಾಶಯದ ಹಿನ್ನೀರಿನಿಂದ ಇರಬಹುದು, ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಇರಬಹುದು, ಫಲವತ್ತಾದ ಲಕ್ಷಾಂತರ ಹೆಕ್ಟೇರ್‌ಗಳಷ್ಟು ಜಮೀನಿನಲ್ಲಿ ಏನು ಸವುಳು ಉಂಟಾಗಿ ಜಮೀನು ಹಾಳಾಗಿದೆ, ಜಮೀನಿನಲ್ಲಿನ ಸವುಳು-ಜವುಳು ತೆಗೆಯುವ ಸಲುವಾಗಿ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಲ್ಲಿ ಸರಿಯಾಗುತ್ತದೆಂದು ನನಗ ನಿಸುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ :- ಬರ ಪರಿಹಾರ ಕಾಮಗಾರಿಯಲ್ಲಿ ಸವುಳು-ಜವುಳು ಕಾರ್ಯಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಈ ಭಾಗದಲ್ಲಿ ಈಗಾಗಲೇ ಕಾರ್ಯಕ್ರಮ ಜಾರಿಗೊಳಿಸಿದ್ದೇವೆ. ಅದನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ.

10. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮಂಡನೆ :-

ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) :- "2009ರ ಜನವರಿ 16ರಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ."